1. ವಿವಿನಿಲಯಕ್ಕೆ Rain Water Harvesting (ಮಳೆ ನೀರು ಕೋಯ್ಲು) ಅಳವಡಿಸಿಕೊಳ್ಳುವುದರ ಮತ್ತು ಕ್ರೀಡಾ ಚಟುವಟಿಕೆ ಸಂಬಂಧಿಸಿದಂತಹ ಆಟದ ಮೈದಾನಗಳಾದ Badminton Court, Volley Ball Court, Basket Ball Court, Foot Ball Court, Cricket Field ಇತ್ಯಾದಿ ಆಟದ ಮೈದಾನವನ್ನು ಸಿದ್ಧಪಡಿಸುವುದರ ಕಾರ್ಯವನ್ನು ನಿರ್ವಹಿಸುವ ಅಂದಾಜು ವೆಚ್ಚ ರೂ. 35.00 ಲಕ್ಷಗಳು ಮತ್ತು

2. ವಿವಿನಿಲಯದ ಆವರಣದಲ್ಲಿ 20 ರಿಂದ 30 ಸಾವಿರ ಶೇಖರಣಾ ಸಾಮರ್ಥ್ಯದ Sewage Treatment Plant (STP) (ಒಳಚರಂಡಿ ಸಂಸ್ಕರಣಾ ಘಟಕ) ಅನ್ನು ಅಳವಡಿಸಿಕೊಳ್ಳುವುದರ ಕಾರ್ಯವನ್ನು ನಿರ್ವಹಿಸುವ ಅಂದಾಜು ವೆಚ್ಚ ರೂ. 30.00 ಲಕ್ಷಗಳು

ಸದರಿ ಕೆಲಸಗಳನ್ನು ನಿರ್ವಹಿಸುವ ಸಂಬಂಧದ ವಿಷಯವನ್ನು ವಿವಿನಿಲಯದ ಮಾನ್ಯ ಕುಲಪತಿಗಳ ಘನ ಅಧ್ಯಕ್ಷತೆಯಲ್ಲಿ ದಿನಾಂಕ 18.09.2021ರಂದು ನಡೆದ 55ನೇ ವಿಶೇಷ ವ್ಯವಸ್ಥಾಪನಾ ಮಂಡಳಿ ಸಭೆಯಲ್ಲಿ ಚರ್ಚೆ ಹಾಗೂ ನಿರ್ಣಯಕ್ಕಾಗಿ ಮಂಡಿಸಲಾಗಿತ್ತು. ಸದರಿ ವಿಷಯದ ಬಗ್ಗೆ ಚರ್ಚಿಸಿದ ಸಭೆಯು ಈ ಕಾರ್ಯವನ್ನು 4ಜಿ ವಿನಾಯಿತಿ ಇರುವ ಸರ್ಕಾರಿ ಸಂಸ್ಥೆಗಳಿಂದ ನಿರ್ವಹಿಸಲು ಅನುಮೋದಿಸಲಾಗಿರುತ್ತದೆ.

ಈ ಸಂಬಂಧ ಕ್ರ.ಸಂ. 01ರಲ್ಲಿ ತಿಳಿಸಿರುವ ಒಟ್ಟಾರೆ ಕೆಲಸಗಳನ್ನು ನಿರ್ವಹಿಸಲು ಹಿಂದಿನ ಸಭೆಯಲ್ಲಿ ಅನುಮೋದಿಸಲ್ಪಟ್ಟಿದ್ದು ಕರ್ನಾಟಕ ಸರ್ಕಾರದಿಂದ ಮಾನ್ಯತೆ ಪಡೆದಿರುವ 4ಜಿ ವಿನಾಯಿತಿ ಹೊಂದಿರುವ ಕೆಆರ್‌ಐಡಿಎಲ್ ಸಂಸ್ಥೆಯವರಿಂದ ಸದರಿ ಕೆಲಸವನ್ನು ನಿರ್ವಹಿಸಲು ಅಂದಾಜನ್ನು ಪಡೆಯಲಾಗಿದ್ದು ಈ ಕೆಲಸಕ್ಕೆ ಪ್ರಸ್ತುತ ರೂ. 49.95 ಲಕ್ಷಗಳು ವೆಚ್ಚವಾಗಲಿರುವುದಾಗಿ ಸದರಿ

ಕುಲಪತಿಗಳು



ಕುಲಸಚಿವರು

ಸಂಸ್ಥೆಯವರು ತಿಳಿಸಿರುತ್ತಾರೆ ಮತ್ತು ಕ್ರ.ಸಂ. 02ರಲ್ಲಿ ತಿಳಿಸಿರುವ ಕೆಲಸಗಳನ್ನು ನಿರ್ವಹಿಸಲು ಹಿಂದಿನ ಸಭೆಯಲ್ಲಿ ಅನುಮೋದಿಸಲ್ಪಟ್ಟಿದ್ದು ಕರ್ನಾಟಕ ಸರ್ಕಾರದಿಂದ ಮಾನ್ಯತೆ ಪಡೆದಿರುವ 4ಜಿ ವಿನಾಯಿತಿ ಹೊಂದಿರುವ ಕೆಆರ್‌ಐಡಿಎಲ್ ಸಂಸ್ಥೆಯವರಿಂದ ಸದರಿ ಕೆಲಸವನ್ನು ನಿರ್ವಹಿಸಲು ಅಂದಾಜನ್ನು ಪಡೆಯಲಾಗಿದ್ದು ಸದರಿ ಸಂಸ್ಥೆಯವರು ವಿವಿನಿಲಯಕ್ಕೆ ಭೇಟಿ ನೀಡಿ ವಿವಿನಿಲಯದ ಭೌಗೋಳಿಕ ವಿಸ್ತೀರ್ಣವನ್ನು ಪರಿಶೀಲಿಸಿ ವಿವಿನಿಲಯದ ಮುಂದಿನ ಅಗತ್ಯದ ದೃಷ್ಟಿಯಿಂದ 70 ರಿಂದ 80 ಸಾವಿರ ಶೇಖರಣ ಸಾಮರ್ಥ್ಯದ Sewage Treatment Plant (STP) (ಒಳಚರಂಡಿ ಸಂಸ್ಕರಣಾ ಘಟಕ) ಅನ್ನು ಅಳವಡಿಸಿಕೊಳ್ಳುವುದರ ಬಗ್ಗೆ ಸಲಹೆ ನೀಡಿದ್ದು ಈ ಕೆಲಸಕ್ಕೆ ಪ್ರಸ್ತುತ ರೂ. 50.00 ಲಕ್ಷಗಳು ವೆಚ್ಚವಾಗಲಿರುವುದಾಗಿ ತಿಳಿಸಿರುತ್ತಾರೆ. ಆದ್ದರಿಂದ ಸದರಿ ಕೆಲಸಗಳನ್ನು ನಿರ್ವಹಿಸಲು ಅನುಸಮರ್ಥನೆಗಾಗಿ ಮಂಡಿಸಿದೆ.

ತೀರ್ಮಾನ :

ಸದರಿ ವಿಷಯವನ್ನು ಚರ್ಚಿಸಿದ ಸಭೆಯು, ಕ್ರಮ ಸಂಖ್ಯೆ : (1) ಮತ್ತು (2) ರ ಕೆಲಸಗಳನ್ನು ನಿರ್ವಹಿಸುವ ಸಂಬಂಧ, ಕರ್ನಾಟಕ ಸರ್ಕಾರದಿಂದ ಮಾನ್ಯತೆ ಪಡೆದು, 4ಜಿ ವಿನಾಯಿತಿ ಹೊಂದಿರುವ ಕೆ.ಆರ್.ಐ.ಡಿ.ಎಲ್. ಸಂಸ್ಥೆಯವರಿಗೆ ಕೆಲಸವನ್ನು ವಹಿಸುವರುವ ಪ್ರಕ್ರಿಯೆಗೆ ಮತ್ತು ಸದರಿ ಕೆಲಸಗಳಿಗೆ ತಗುಲುವ ಅಂದಾಜು ವೆಚ್ಚದ ವಿಷಯಕ್ಕೆ ಅನುಸಮರ್ಥನೆ ನೀಡಿತು.

* * * * * * *

ವಿಷಯ ಸಂಖ್ಯೆ : 166.09

ವಿಷಯ : ರಾಮನಗರ ಜಿಲ್ಲೆಯ ತಿಪ್ಪಸಂದ್ರ ಗ್ರಾಮದಲ್ಲಿ ಸಂಸ್ಕೃತ ವಿಶ್ವವಿದ್ಯಾನಿಲಯ ಕೇಂದ್ರ ಹಾಗೂ ಕರಾಮುವಿಯ ಪ್ರಾದೇಶಿಕ ಕೇಂದ್ರ ಕಟ್ಟಡಗಳ ನಿರ್ಮಾಣ ಮತ್ತು ಮಂಗಳೂರು, ಧಾರವಾಡ ಜಿಲ್ಲೆಗಳಲ್ಲಿ ಪ್ರಾದೇಶಿಕ ಕೇಂದ್ರ ಕಟ್ಟಡಗಳ ನಿರ್ಮಾಣ ಹಾಗೂ ವಿವಿನಿಲಯದಲ್ಲಿ ಹಂಸ ಮತ್ತು ಮಾನಸ ಕಟ್ಟಡಗಳ ಉನ್ನತೀಕರಣ ಮತ್ತು ವಿವಿನಿಲಯವು ದತ್ತು ಪಡೆದಿರುವ ಶಾಲೆಗಳ ಕಟ್ಟಡ ನಿರ್ಮಾಣ ಹಾಗೂ ದುರಸ್ತಿ ನಿರ್ವಹಣೆ ಮತ್ತು ಇತರೆ ಕೆಲಸಗಳನ್ನು ನಿರ್ವಹಿಸುವ ಬಗ್ಗೆ.

* * * * *

ರಾಮನಗರ ಜಿಲ್ಲೆಯ ತಿಪ್ಪಸಂದ್ರ ಗ್ರಾಮದಲ್ಲಿ ಸಂಸ್ಕೃತ ವಿಶ್ವವಿದ್ಯಾನಿಲಯ ಕೇಂದ್ರ ಹಾಗೂ ಕರಾಮುವಿಯ ಪ್ರಾದೇಶಿಕ ಕೇಂದ್ರ ಕಟ್ಟಡಗಳ ನಿರ್ಮಾಣ ಮತ್ತು ಮಂಗಳೂರು, ಧಾರವಾಡ ಜಿಲ್ಲೆಗಳಲ್ಲಿ ಪ್ರಾದೇಶಿಕ ಕೇಂದ್ರ ಕಟ್ಟಡಗಳ ನಿರ್ಮಾಣ ಹಾಗೂ ವಿವಿನಿಲಯದಲ್ಲಿ ಹಂಸ ಮತ್ತು ಮಾನಸ ಕಟ್ಟಡಗಳ ಉನ್ನತೀಕರಣ ಮತ್ತು ವಿವಿನಿಲಯವು ದತ್ತು ಪಡೆದಿರುವ ಶಾಲೆಗಳ ಕಟ್ಟಡ ನಿರ್ಮಾಣ ಹಾಗೂ ದುರಸ್ತಿ ನಿರ್ವಹಣೆ ಮತ್ತು ಇತರೆ ಕೆಲಸಗಳನ್ನು ನಿರ್ವಹಿಸಲು ದಿನಾಂಕ 17.08.2020ರಂದು ನಡೆದ ವಿಶೇಷ 54ನೇ ವ್ಯವಸ್ಥಾಪನ ಮಂಡಳಿ ಸಭೆಯಲ್ಲಿ ರೂ. 8597.00 ಲಕ್ಷಗಳಿಗೆ ಕಾಮಗಾರಿಗಳನ್ನು ನಿರ್ವಹಿಸುವ ಸಂಬಂಧ ಅಲ್ಪಾವಧಿ ಟೆಂಡರ್ ಕರೆದು ಕೆಲಸವನ್ನು ನಿರ್ವಹಿಸಲು ಸಭೆಯಲ್ಲಿ ತೀರ್ಮಾನಿಸಲಾಗಿರುತ್ತದೆ. ಅಂತೆಯೇ ನಿಯಮಾನುಸಾರ ಟೆಂಡರ್ ಆಹ್ವಾನಿಸಿದ್ದು ಸದರಿ ಟೆಂಡರ್‌ನಲ್ಲಿ ಈ ಕಾಮಗಾರಿಗಳ ಕೆಲಸಕ್ಕೆ ಗುತ್ತಿಗೆದಾರರಾದ (1) ಮೆ॥ ಬಿ.ಎಸ್.ಆರ್. ಇನ್‌ಫ್ರಾಟೆಕ್ ಇಂಡಿಯಾ ಲಿಮಿಟೆಡ್, ಬೆಂಗಳೂರು (2) ಮೆ॥ ಕೆ.ಎಂ.ವಿ ಪ್ರಾಜೆಕ್ಟ್, ಬೆಂಗಳೂರು (3) ಮೆ॥ ಸ್ಟಾರ್ ಇನ್‌ಫ್ರಾಟೆಕ್, ಬೆಂಗಳೂರು ಇವರುಗಳು ಟೆಂಡರ್ ಸಲ್ಲಿಸಿರುತ್ತಾರೆ. ಟೆಂಡರ್ ಸಮಿತಿ ಸಭೆಯ ಸದಸ್ಯರುರವರುಗಳ ಸಮ್ಮುಖದಲ್ಲಿ ಟೆಂಡರ್ ದಾಖಲೆಗಳನ್ನು ದಿನಾಂಕ 04.11.2021ರಂದು ಪರಿಶೀಲ್ಲಿಸಲಾಗಿ, ಸದರಿ ಕೆಲಸಕ್ಕೆ ಟೆಂಡರ್ ಸಲ್ಲಿಸಿದ್ದ ಮೂವರು ಗುತ್ತಿಗೆದಾರರುಗಳ ಪೈಕಿ ಮೆ॥

ಕುಲಪತಿಗಳು                ಕುಲಸಚಿವರು

ಬಿ.ಎಸ್.ಆರ್. ಇನ್‌ಫ್ರಾಟೆಕ್ ಇಂಡಿಯಾ ಲಿಮಿಟೆಡ್, ಬೆಂಗಳೂರು, ಇವರು ಟೆಂಡರ್ ಮೊತ್ತಕ್ಕೆ (ಟೆಂಡರ್‌ನ ಮೊತ್ತ ರೂ. 76,06,99,539.08) ರೂ. 94,28,56,673.71ಗಳನ್ನು ನಮೂದಿಸಿದ್ದು, ಈ ಸಂಬಂಧ ಕಡಿಮೆ ದರ ನಮೂದಿಸಿ (ಐ1) ಆಗಿರುವ ಮೆ॥ ಬಿ.ಎಸ್.ಆರ್. ಇನ್‌ಫ್ರಾಟೆಕ್ ಇಂಡಿಯಾ ಲಿಮಿಟೆಡ್, ಬೆಂಗಳೂರು, ಇವರೊಂದಿಗೆ ದಿನಾಂಕ: 15.11.2021ರಂದು ಸಂಧಾನ ನಡೆಸಲಾಗಿದ್ದು, ಸಂಧಾನದಲ್ಲಿ ಗುತ್ತಿಗೆದಾರರು ಟೆಂಡರ್ ಸಲ್ಲಿಸಿರುವ ಮೊತ್ತದಲ್ಲಿ ರೂ. 28,56,673.71ಗಳಷ್ಟನ್ನು ಕಡಿಮೆ ಮಾಡಿಕೊಂಡು ರೂ. 94,00,00,000/-ಗಳಿಗೆ ಕೆಲಸ ನಿರ್ವಹಿಸಲು ಒಪ್ಪಿರುತ್ತಾರೆ. ಆದುದರಿಂದ ಸದರಿ ವಿಷಯವನ್ನು ಸಭೆಯ ಗಮನಕ್ಕೆ ಮಂಡಿಸುತ್ತಾ ಮೆ॥ ಬಿ.ಎಸ್.ಆರ್. ಇನ್‌ಫ್ರಾಟೆಕ್ ಇಂಡಿಯಾ ಲಿಮಿಟೆಡ್, ಬೆಂಗಳೂರು, ಇವರಿಗೆ ಸದರಿ ಕೆಲಸವನ್ನು ಟೆಂಡರ್ ಮೊತ್ತದ ಮೇಲೆ ರೂ. 94,00,00,000/-ಗಳಿಗೆ ಕೆಲಸವನ್ನು ಗುತ್ತಿಗೆದಾರರಿಗೆ ನೀಡುವುದರ ಬಗ್ಗೆ ಸಭೆಯ ಚರ್ಚೆ ಹಾಗೂ ನಿರ್ಣಯಕ್ಕಾಗಿ ಮಂಡಿಸಿದೆ.

<u>ತೀರ್ಮಾನ</u> :

ಸದರಿ ವಿಷಯವನ್ನು ಕೂಲಂಕಷವಾಗಿ ಚರ್ಚಿಸಲಾಯಿತು. ವಿಷಯದಲ್ಲಿ ಪ್ರಸ್ತಾಪಿಸಿರುವ ಕೆಲಸಗಳನ್ನು ನಿರ್ವಹಿಸುವ ಸಂಬಂಧ ಮೂರು ಫರ್ಮ್‌ಗಳ ಪೈಕಿ ಕಡಿಮೆ ದರ ನಮೂದಿಸಿ ಎಲ್-1 ಆಗಿರುವ ಗುತ್ತಿಗೆದಾರರಾದ ಮೆ॥ ಬಿ.ಎಸ್.ಆರ್. ಇನ್‌ಫ್ರಾಟೆಕ್ ಇಂಡಿಯಾ ಲಿಮಿಟೆಡ್, ಬೆಂಗಳೂರು, ಇವರಿಗೆ ರೂ. 94,00,00,000/- ಗಳಿಗೆ ಕೆಲಸವನ್ನು ನಿರ್ವಹಿಸಲು ಅನುಮೋದನೆ ನೀಡಿತು ಹಾಗೂ ಆಗಿಂದಾಗ್ಗೆ ಸಲ್ಲಿಸುವ ಭಾಗಶಃ ಹುಂಡಿಗಳನ್ನೂ ಸಹ ಪಾವತಿಸಲು ಸಭೆಯು ಅನುಮೋದಿಸಿತು.

* * * * * * *

<u>ವಿಷಯ ಸಂಖ್ಯೆ : 166.10</u>

ವಿಷಯ : ಕರಾಮುವಿಯ ಪ್ರಾದೇಶಿಕ ಕೇಂದ್ರಗಳು, ಕೇಂದ್ರ ಕಛೇರಿಯಲ್ಲಿ ವಿವಿಧ ಕಟ್ಟಡಗಳು ಹಾಗೂ ಕರಾಮುವಿ ದತ್ತು ಪಡೆದ ಶಾಲೆಗಳ ಮೂಲ ಸೌಕರ್ಯಗಳ ನಿರ್ವಹಣೆ ಹಾಗೂ ನಿರ್ಮಾಣ ಕೆಲಸಗಳಿಗೆ ಪ್ರಾಜೆಕ್ಟ್ ಮ್ಯಾನೇಜ್‌ಮೆಂಟ್ ಕನ್ಸ್‌ಲ್ಟೆನ್ಸಿ (PMC) ಏಜೆನ್ಸಿಯವರನ್ನು ನೇಮಿಸಿಕೊಳ್ಳುವುದರ ಬಗ್ಗೆ.

* * * * *

ರಾಮನಗರ ಜಿಲ್ಲೆಯ ತಿಪ್ಪಸಂದ್ರ ಗ್ರಾಮದಲ್ಲಿ ಸಂಸ್ಕೃತ ವಿಶ್ವವಿದ್ಯಾನಿಲಯ ಕೇಂದ್ರ ಹಾಗೂ ಕರಾಮುವಿಯ ಪ್ರಾದೇಶಿಕ ಕೇಂದ್ರ ಕಟ್ಟಡಗಳ ನಿರ್ಮಾಣ ಮತ್ತು ಮಂಗಳೂರು, ಧಾರವಾಡ ಜಿಲ್ಲೆಗಳಲ್ಲಿ ಪ್ರಾದೇಶಿಕ ಕೇಂದ್ರ ಕಟ್ಟಡಗಳ ನಿರ್ಮಾಣ ಹಾಗೂ ವಿವಿನಿಲಯದಲ್ಲಿ ಹಂಸ ಮತ್ತು ಮಾನಸ ಕಟ್ಟಡಗಳ ಉನ್ನತೀಕರಣ ಮತ್ತು ವಿವಿನಿಲಯವು ದತ್ತು ಪಡೆದಿರುವ ಶಾಲೆಗಳ ಕಟ್ಟಡ ನಿರ್ಮಾಣ ಹಾಗೂ ದುರಸ್ತಿ ನಿರ್ವಹಣೆ ಮತ್ತು ಇತರೆ ಕೆಲಸಗಳನ್ನು ನಿರ್ವಹಿಸುವ ಸಂಬಂಧ ಸದರಿ ಕಾಮಗಾರಿಗಳ ಗುಣಮಟ್ಟದ ಪರಿವೀಕ್ಷಣೆಕಾಗಿ ಪ್ರಾಜೆಕ್ಟ್ ಮ್ಯಾನೇಜ್‌ಮೆಂಟ್ ಕನ್ಸ್‌ಲ್ಟೆನ್ಸಿ (PMC) ಏಜೆನ್ಸಿ ಒಬ್ಬರನ್ನು ನೇಮಿಸಿಕೊಂಡು ಕಾಮಗಾರಿ ಗುಣಮಟ್ಟದ ಬಗ್ಗೆ ಆಗಿಂದ್ದಾಗೆ ಹಂತ ಹಂತವಾಗಿ ಪರಿವೀಕ್ಷಿಸಿ ಕೆಲಸದ ಕಾಮಗಾರಿಯನ್ನು ನಿರ್ವಹಿಸಲು ದಿನಾಂಕ 17.08.2020ರಂದು ನಡೆದ ವಿಶೇಷ 54ನೇ ವ್ಯವಸ್ಥಾಪನ ಮಂಡಳಿ ಸಭೆಯಲ್ಲಿ ಪ್ರಾಜೆಕ್ಟ್ ಮ್ಯಾನೇಜ್‌ಮೆಂಟ್ ಕನ್ಸ್‌ಲ್ಟೆನ್ಸಿ (PMC) ರವರನ್ನು ನೇಮಿಸಿಕೊಳ್ಳಲು ಸಭೆಯಲ್ಲಿ ತೀರ್ಮಾನಿಸಲಾಗಿರುತ್ತದೆ. ಅಂತೆಯೇ ನಿಯಮಾನುಸಾರ ಟೆಂಡರ್ ಪ್ರಕಟಿಸಿದ್ದು, ಸದರಿ ಕೆಲಸಕ್ಕಾಗಿ ಒಟ್ಟು ಹತ್ತು ಏಜೆನ್ಸಿ/ಫರ್ಮ್‌ರವರು ಟೆಂಡರ್

ಕುಲಪತಿಗಳು ಕುಲಸಚಿವರು.

ಸಲ್ಲಿಸಿರುತ್ತಾರೆ. ಟೆಂಡರ್ ಸಲ್ಲಿಸಿದ್ದ ಒಟ್ಟು ಹತ್ತು ಏಜೆನ್ಸಿ/ಫರ್ಮ್‌ರವರುಗಳ ದಾಖಲೆಗಳನ್ನು ಪರಿಶೀಲಿಸಲಾಗಿ ಇವರುಗಳ ಪೈಕಿ 02 ಫರ್ಮ್‌ರವರು ಟೆಂಡರ್‌ನಲ್ಲಿನ ಷರತ್ತಿನಂತೆ pre-qualification ನಲ್ಲಿ ಅರ್ಹತೆ ಹೊಂದಿರುತ್ತಾರೆ. ಇವರುಗಳ Technical Evaluation ನಲ್ಲಿನ ಅನುಸಾರ ಕನಿಷ್ಠ ಅಂಕ (75 ಅಂಕಗಳು) ಪಡೆದಿರುವ ಫರ್ಮ್‌ರವರ ವಿತ್ತಿಯ ಬಿಡ್‌ಗಳನ್ನು ಮಾತ್ರ ಟೆಂಡರ್ ನಿಯಮದಂತೆ ತೆರೆಯಲಾಗಿದ್ದು, ದಿನಾಂಕ 04.11.2020ರಂದು ಟೆಂಡರ್ ಪರಿಶೀಲನ ಸಮಿತಿಯಲ್ಲಿ pre-qualification ಮತ್ತು Technical Evaluationನಲ್ಲಿ ಅರ್ಹತೆ ಇರುವ ಇಬ್ಬರು ಫರ್ಮ್‌ರವರ ವಿತ್ತಿಯ ಬಿಡ್ಡನ್ನು ತೆರೆಯಲು ಒಪ್ಪಿಗೆ ಸೂಚಿಸಲಾಗಿರುತ್ತದೆ. ಅಂತೆಯೇ ಈ ಇಬ್ಬರು ಫರ್ಮ್‌ರವರಾದ ವಿತ್ತೀಯ ಬಿಡ್‌ಗಳನ್ನು ದಿನಾಂಕ 08.11.2021ರಂದು ತೆರೆಯಲಾಗಿದ್ದು ಈ ಇಬ್ಬರು ಫರ್ಮ್‌ರವರುಗಳ ಪೈಕಿ (1) M/s Infra Support Engineering Consultants Pvt. Ltd., Bengaluru ಇವರು ಸದರಿ ಕೆಲಸಕ್ಕಾಗಿ ಅಂದಾಜು ಮೊತ್ತದ ಮೇಲೆ ಶೇ. 1.98 ರಷ್ಟನ್ನು ನಮೂದಿಸಿದ್ದು, ಮತ್ತೊಬ್ಬರಾದ (2) M/s Alcon Consulting Engineers India Pvt., Ltd., ಇವರು ಅಂದಾಜು ಮೇಲೆ ಶೇ. 2.26 ರಷ್ಟನ್ನು ನಮೂದಿಸಿರುತ್ತಾರೆ.

ಈ ಇಬ್ಬರು ಫರ್ಮ್‌ರವರುಗಳಲ್ಲಿ ಸದರಿ ಕೆಲಸಕ್ಕಾಗಿ ಕಡಿಮೆ ಶೇಕಡಾಂಶವನ್ನು ನಮೂದಿಸಿ (L1) ಆಗಿರುವ M/s Infra Support Engineering Consultants Pvt. Ltd., Bengaluru ಇವರನ್ನು ಟೆಂಡರ್ ನಿಯಮ ಪ್ರಕಾರ ಸಂಧಾನವನ್ನು ದಿನಾಂಕ 15.11.2021ರಂದು ನಡೆಸಲಾಗಿರುತ್ತದೆ. ಸಂಧಾನದಲ್ಲಿ ಬಿಡ್ಡುದಾರರು ಅಂದಾಜಿನ ಮೇಲೆ ಶೇಕಡ 1.98 ರಷ್ಟಿಗೆ ಬದಲಾಗಿ ಶೇಕಡ 1.90 ರಷ್ಟು ಹೆಚ್ಚಿಗೆಗೆ ನಿರ್ವಹಿಸಲು ಒಪ್ಪಿರುತ್ತಾರೆ. ಆದುದರಿಂದ, ಸದರಿ ವಿಷಯವನ್ನು ಸಭೆಯ ಗಮನಕ್ಕೆ ಮಂಡಿಸುತ್ತಾ M/s Infra Support Engineering Consultants Pvt. Ltd., Bengaluru ಇವರಿಗೆ ಅಂದಾಜು ಮೊತ್ತದ ಮೇಲೆ ಶೇಕಡ 1.90ರಷ್ಟು ಹೆಚ್ಚಿಗೆ ನೀಡಲು ಪ್ರಾಜೆಕ್ಟ್ ಮ್ಯಾನೇಜ್‌ಮೆಂಟ್ ಕನ್ಸಲ್ಟೆನ್ಸಿ (PMC) ಏಜೆನ್ಸಿಯವರನ್ನು ನೇಮಿಸಿಕೊಳ್ಳುವುದರ ಬಗ್ಗೆ ಸಭೆಯ ಚರ್ಚೆ ಹಾಗೂ ನಿರ್ಣಯಕ್ಕಾಗಿ ಮಂಡಿಸಿದೆ.

<u>ತೀರ್ಮಾನ</u> :

**ವಿಷಯವನ್ನು ಚರ್ಚಿಸಿದ ಸಭೆಯು, ವಿಷಯದಲ್ಲಿ ಪ್ರಸ್ತಾಪಿಸಿರುವ ಕೆಲಸಗಳನ್ನು ನಿರ್ವಹಿಸುವ ಸಂಬಂಧ ಇಬ್ಬರು ಫರ್ಮ್‌ನವರ ಪೈಕಿ ಕಡಿಮೆ ಶೇಕಡಾಂಶವನ್ನು ನಮೂದಿಸಿ, ಎಲ್-1 ಆಗಿರುವ M/s. Infra Support Engineering Consultants Pvt. Ltd., Bengaluru, ಇವರಿಗೆ ಶೇ. 1.90ರಷ್ಟಕ್ಕೆ ಒಪ್ಪಿ ಪ್ರಾಜೆಕ್ಟ್ ಮ್ಯಾನೇಜ್‌ಮೆಂಟ್ ಕನ್ಸಲ್ಟೆನ್ಸಿ (PMC) ಏಜೆನ್ಸಿಯವರನ್ನು ನೇಮಿಸಿಕೊಂಡು ಕೆಲಸವನ್ನು ನಿರ್ವಹಿಸಲು ಅನುಮೋದಿಸಿತು ಹಾಗೂ ಆಗಿಂದಾಗ್ಗೆ ಸಲ್ಲಿಸುವ ಭಾಗಶಃ ಹುಂಡಿಗಳನ್ನೂ ಸಹ ಪಾವತಿಸಲು ಸಭೆಯು ಅನುಮೋದಿಸಿತು.**

* * * * * * *

<u>ವಿಷಯ ಸಂಖ್ಯೆ: 166.11</u>

ವಿಷಯ : **ಶ್ರೀ ಅರುಣ್ ಕುಮಾರ್ ರಾಜೇ ಅರಸ್, ಮತ್ತು ಶ್ರೀ ವಲಿಯುಲ್ಲಾ ಸಾಹೇಬ್, ಇವರುಗಳ ಹಿಂದಿನ ದಿನಗೂಲಿ/ ತಾತ್ಕಾಲಿಕ ಸೇವೆಯನ್ನು ಪರಿಗಣಿಸಿ ಸೇವಾ ಸೌಲಭ್ಯಗಳನ್ನು ಒದಗಿಸಿ ಕೊಡುವ ಬಗ್ಗೆ.**

* * * * * *

ಕುಲಪತಿಗಳು



ಕುಲಸಚಿವರು

ಶ್ರೀ ಅರುಣ್ ಕುಮಾರ್ ರಾಜೇ ಅರಸ್, ಪ್ರಸ್ತುತ ಅಧೀಕ್ಷಕರು, ಅತಿಥಿಗೃಹ, ಕರಾಮುವಿ ಹಾಗೂ ಶ್ರೀ ವಲಿಯುಲ್ಲಾ ಸಾಹೇಬ್, ಪ್ರಸ್ತುತ ಅಧೀಕ್ಷಕರು, ಕೋಲಾರ ಪ್ರಾದೇಶಿಕ ಕೇಂದ್ರ, ಇವರುಗಳು ಮನವಿಗಳನ್ನು ನೀಡಿ, ತಮ್ಮಗಳ ಖಾಯಂ ಪೂರ್ವ ಅವಧಿಯ ತಾತ್ಕಾಲಿಕ ಸೇವೆಯನ್ನು ಸಕ್ರಮಗೊಳಿಸಿ ನನ್ನ ಹಿಂದಿನ ಸೇವೆಯ ಸೇವಾ ಸೌಲಭ್ಯಗಳನ್ನು ಒದಗಿಸಿಕೊಡಬೇಕೆಂದು ಕೋರಿರುತ್ತಾರೆ. ಸದರಿಯವರುಗಳ ಮನವಿಗಳನ್ನು ನೇಮಕಾತಿ ಪ್ರಾಧಿಕಾರವಾದ ವ್ಯವಸ್ಥಾಪನಾ ಮಂಡಳಿ ಸಭೆಗೆ ವಿಷಯ ಮಂಡಿಸಲು ಮಾನ್ಯ ಕುಲಪತಿಗಳು ಆದೇಶಿಸಿದ್ದ ಹಿನ್ನೆಲೆಯಲ್ಲಿ ಸದರಿವರುಗಳ ಮನವಿಯನ್ನು ಕೆಳಕಂಡ ವಿವರಗಳೊಂದಿಗೆ ಮಂಡಿಸಿದೆ.

ಶ್ರೀ ಅರುಣ್ ಕುಮಾರ್ ರಾಜೇ ಅರಸ್, ಇವರು ದಿನಾಂಕ: 16.05.1994ರಲ್ಲಿ ಈ ಹಿಂದಿನ ಅಂಚೆ ಮತ್ತು ತೆರೆಪಿನ ಶಿಕ್ಷಣ ಸಂಸ್ಥೆಯಲ್ಲಿ ದಿನಗೂಲಿ (ಮಾಸಿಕ ವೇತನ) ಆಧಾರದ ಮೇಲೆ ದ್ವಿತೀಯ ದರ್ಜೆ ಗುಮಾಸ್ತನಾಗಿ ವಿಶ್ವವಿದ್ಯಾನಿಲಯದ ಸೇವೆಗೆ ಸೇರ್ಪಡೆಗೊಂಡಿರುತ್ತಾರೆ. ನಂತರ ಕರ್ನಾಟಕ ಸರ್ಕಾರವು ಜೂನ್ 1996ರಲ್ಲಿ ಈ ಹಿಂದಿನ ಅಂಚೆ ಮತ್ತು ತೆರಪಿನ ಶಿಕ್ಷಣ ಸಂಸ್ಥೆಯನ್ನು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯವನ್ನಾಗಿ ಪರಿವರ್ತಿಸಿದ ನಂತರವೂ ನನ್ನ ಹಿಂದಿನ ಸೇವೆಯ ಆಧಾರದ ಮೇಲೆ ದಿನಗೂಲಿ (ಮಾಸಿಕ ವೇತನ) ಸೇವೆಯ ಮೇಲೆ ಮುಂದುವರೆಸಲಾಗಿರುತ್ತದೆ. ನಂತರ, ಇವರ ನಿರಂತರ ಹಿಂದಿನ ಸೇವೆಯ ಆಧಾರದ ಮೇಲೆ ದಿನಾಂಕ: 01.02.1999ರಲ್ಲಿ ನಿಯಮಗಳ ಅನುಸಾರವೇ ಖಾಯಂ ನೌಕರರಾಗಿದ್ದ ಶ್ರೀ ಬೋರೇಗೌಡ, ದ್ವಿ.ದ.ಗು., ಇವರ ನಿವೃತ್ತಿಯಿಂದ ತೆರವಾದ ದ್ವಿತೀಯ ದರ್ಜೆ ಗುಮಾಸ್ತರ (ಎಸ್.ಡಿ.ಸಿ) ಹುದ್ದೆಗೆ ಎದುರಾಗಿ ಪೂರ್ಣ ವೇತನ ಶ್ರೇಣಿಯನ್ನು ನಿಗದಿಗೊಳಿಸಿ ನೇಮಕ ಮಾಡಲಾಗಿರುತ್ತದೆ. ಹಾಗೆಯೇ, ನಿಯಮಾನುಸಾರ ಸೇವಾ ಪುಸ್ತಕವನ್ನು ತೆರೆದು, ಕಾಲಕಾಲಕ್ಕೆ ಲಭ್ಯವಾಗುವ ರಜಾ ಸೌಲಭ್ಯಗಳು ಮತ್ತಿತರೆ ಸೌಲಭ್ಯವನ್ನು ನೀಡಲಾಗಿರುತ್ತದೆ. ನಂತರ ಕರಾಮುವಿಯಲ್ಲಿ 2007ರಲ್ಲಿ ನಡೆದ ನೇರ ನೇಮಕಾತಿಯಲ್ಲಿ ಅವರ ಹಿಂದಿನ ಸೇವೆಯನ್ನು ಪರಿಗಣಿಸಿ ನಿಯಮಾನುಸಾರ ದ್ವಿತೀಯ ದರ್ಜೆ ಗುಮಾಸ್ತ ಹುದ್ದೆಯಲ್ಲಿ ಖಾಯಂಗೊಳಿಸಲಾಗಿರುತ್ತದೆ.

ಹಾಗೆಯೇ, ಶ್ರೀ ವಲಿಯುಲ್ಲಾ ಸಾಹೇಬ್ ಆರ್.ಪಿ. ಇವರು ಕರಾಮುವಿಯ ಹಿಂದಿನ ಅಂಚೆ ಮತ್ತು ತೆರೆಪಿನ ಶಿಕ್ಷಣ ಸಂಸ್ಥೆಯಲ್ಲಿ ಗ್ರಂಥಾಲಯ ಅಪ್ರೆಂಟಿಸ್ ಆಗಿ ಏಪ್ರಿಲ್ 1992ರಲ್ಲಿ ದಿನಗೂಲಿ/ಗುತ್ತಿಗೆ ಆಧಾರದ ನೌಕರರಾಗಿ ನೇಮಕಗೊಂಡು ಸೇವೆ ಸಲ್ಲಿಸುತ್ತಿದ್ದರು. ನಂತರ ಕರ್ನಾಟಕ ಸರ್ಕಾರವು ಜೂನ್ 1996ರಲ್ಲಿ ಈ ಹಿಂದಿನ ಅಂಚೆ ಮತ್ತು ತೆರಪಿನ ಶಿಕ್ಷಣ ಸಂಸ್ಥೆಯನ್ನು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯವನ್ನಾಗಿ ಪರಿವರ್ತಿಸಿದ ನಂತರವೂ ಇವರ ಸೇವೆಯು ಮುಂದುವರೆಸಲಾಗಿರುತ್ತದೆ. 1998ರಲ್ಲಿ ಮೈಸೂರು ವಿವಿ ನಿಲಯವು ಗ್ರಂಥಾಲಯ ಅಪ್ರೆಂಟಸ್ ಆಗಿ ಕೆಲಸ ನಿರ್ವಹಿಸುತ್ತಿದ್ದವರನ್ನು ಗ್ರಂಥಾಲಯ ಸಹಾಯಕ ಹುದ್ದೆಯಲ್ಲಿ ಖಾಯಂಗೊಳಿಸಿದ್ದ ಆಧಾರದ ಮೇಲೆ ಸದರಿಯವರನ್ನು ಸಹ ಕರಾಮುವಿ ನಿಲಯದಲ್ಲಿ ದಿನಾಂಕ: 03.08.1998 ರಲ್ಲಿ ಗ್ರಂಥಾಲಯ ಸಹಾಯಕ ಹುದ್ದೆಗೆ ಎದುರಾಗಿ ಪೂರ್ಣ ವೇತನ ಶ್ರೇಣಿಯಲ್ಲಿ ನೇಮಕ ಮಾಡಿ, ಸೇವಾ ಪುಸ್ತಕ ವನ್ನು ತೆರೆಯಲಾಗಿರುತ್ತದೆ. ಕಾಲಕಾಲಕ್ಕೆ ಲಭ್ಯವಾಗುವ ರಜಾ ಸೌಲಭ್ಯಗಳು ಮತ್ತಿತರೆ ಸೌಲಭ್ಯವನ್ನು ನೀಡಲಾಗಿರುತ್ತದೆ. ನಂತರ ಕರಾಮುವಿಯಲ್ಲಿ 2007ರಲ್ಲಿ ನಡೆದ ನೇರ ನೇಮಕಾತಿಯಲ್ಲಿ ಅವರ ಹಿಂದಿನ ಸೇವೆಯನ್ನು ಪರಿಗಣಿಸಿ ನಿಯಮಾನುಸಾರ ಪ್ರಥಮ ದರ್ಜೆ ಗುಮಾಸ್ತ ಹುದ್ದೆಯಲ್ಲಿ ಖಾಯಂಗೊಳಿಸಲಾಗಿರುತ್ತದೆ.

ಸದರಿಯವರುಗಳು ನೀಡಿರುವ ಮನವಿಗಳಲ್ಲಿ, ತಾವುಗಳು ಯಾವುದೇ ತಡೆಯಿಲ್ಲದೆ ನಿರಂತರವಾಗಿ ಸತತವಾಗಿ ಹತ್ತು ವರ್ಷಗಳ ತಾತ್ಕಾಲಿಕ ಸೇವೆಯನ್ನು ಕ್ರಮವಾಗಿ 2002/ 2004ರಲ್ಲಿಯೇ ಪೂರೈಸಿರುತ್ತೇವೆ. ಕರಾಮುವಿ ನಿಲಯವು ಕೆಸಿಎಸ್ ನಿಯಮಗಳನ್ನು ಅನುಸರಿಸಲು ತನ್ನದೇ ಆದ ಪರಿನಿಯಮ {KSOU (Adoption of Service Rules of State Government) Statutes-2009}

ಕುಲಪತಿಗಳು

ಕುಲಸಚಿವರು

ವನ್ನು ರಚಿಸಿಕೊಂಡಿದ್ದು, ಅದರನ್ವಯ ಸದರಿ ಕೆಸಿಎಸ್ ನಿಯಮಗಳನ್ನೇ ಅಳವಡಿಸಿಕೊಳ್ಳಲಾಗಿದ್ದು, ಸರ್ವೋಚ್ಚ ನ್ಯಾಯಾಲಯದ ತೀರ್ಪು ಹಾಗೂ ಸರ್ಕಾರದ ಆದೇಶವನ್ನು ತಮಗೂ ಅನ್ವಯಿಸಿ, ತಮ್ಮಗಳ ಖಾಯಂ ಪೂರ್ವ ಅವಧಿಯ ತಾತ್ಕಾಲಿಕ ಸೇವೆಯನ್ನು ಸಕ್ರಮಗೊಳಿಸಿ ತಮ್ಮ ಹಿಂದಿನ ಸೇವೆಯ ಸೇವಾ ಸೌಲಭ್ಯಗಳನ್ನು ಒದಗಿಸಿಕೊಡಬೇಕೆಂದು ವಿನಂತಿಸಿರುತ್ತಾರೆ.

ಮಾನ್ಯ ಸರ್ವೋಚ್ಚ ನ್ಯಾಯಾಲಯವು, ದಿನಾಂಕ: 01.07.1984ರ ನಂತರ "ರಾಜ್ಯ ಸರ್ಕಾರ ಅಥವಾ ಅದರ ಅಧೀನ ಸಂಸ್ಥೆಗಳಲ್ಲಿ ಅಕ್ರಮವಾಗಿ ದಿನಗೂಲಿ/ತಾತ್ಕಾಲಿಕವಾಗಿ ನೇಮಕಗೊಂಡಿರುವ ನೌಕರರು ಯಾವುದೇ ತಡೆಯಿಲ್ಲದೆ ನಿರಂತರವಾಗಿ ಸತತವಾಗಿ 10 ವರ್ಷಗಳ ಕಾಲ ಸೇವೆ ಸಲ್ಲಿಸಿದ್ದರೆ, ಅವರು ಹತ್ತು ವರ್ಷಗಳನ್ನು ಪೂರೈಸಿದ ಮರು ದಿನದಿಂದ ಅವರ ವಿದ್ಯಾರ್ಹತೆಯನ್ನು ಪರಿಗಣಿಸಿ ಒಂದು ಬಾರಿಯ ಕ್ರಮವಾಗಿ ಅವರ ಸೇವೆಯನ್ನು ಸಕ್ರಮಗೊಳಿಸಲು" ಮಾನ್ಯ ಸರ್ವೋಚ್ಚ ನ್ಯಾಯಾಲಯದ ಸಂವಿಧಾನ ಪೀಠವು ತೀರ್ಪು ನೀಡಿರುತ್ತದೆ.

ಈ ತೀರ್ಪಿನ ಆಧಾರದ ಮೇಲೆ ಉಲ್ಲೇಖಿತ ಆದೇಶದಂತೆ ಕರ್ನಾಟಕ ಸರ್ಕಾರದ ವಾಣಿಜ್ಯ ತೆರಿಗೆ ಇಲಾಖೆಯು, ದಿನಾಂಕ: 01.07.1984ರ ನಂತರ ಇಲಾಖೆಯಲ್ಲಿ ಅಕ್ರಮವಾಗಿ ದಿನಗೂಲಿ ಆಧಾರದ ಮೇಲೆ ನೇಮಕಗೊಂಡು ದಿನಾಂಕ: 01.04.2006ಕ್ಕೆ ಮುಂಚೆಯೇ ಹತ್ತು ವರ್ಷಗಳ ಸೇವಾವಧಿಯನ್ನು ಪೂರೈಸಿರುವ ನೌಕರರ ಸೇವೆಯನ್ನು ಒಂದು ಬಾರಿಯ ಕ್ರಮವಾಗಿ ಸಕ್ರಮಗೊಳಿಸಿ ಅವರಿಗೆ ಹಿಂದಿನ ಸೇವೆಯ ಸೇವಾ ಸೌಲಭ್ಯಗಳನ್ನು ಒದಗಿಸಿ ಕೊಡಲಾಗಿರುತ್ತದೆ (ಪ್ರತಿ ಲಗತ್ತಿಸಿದೆ).

ಮೇಲಿನ ಅಂಶಗಳೊಂದಿಗೆ, ಅವರುಗಳ ಹಿಂದಿನ ದಿನಗೂಲಿ / ತಾತ್ಕಾಲಿಕ ಸೇವೆಯನ್ನು ಪರಿಗಣಿಸಿ ಹಳೆಯ ಪಿಂಚಣಿ ಯೋಜನೆಗೆ ಪರಿಗಣಿಸಿ ಸೇವಾ ಸೌಲಭ್ಯಗಳನ್ನು ಒದಗಿಸಿಕೊಡುವ ಬಗೆಗಿನ ವಿಷಯವನ್ನು ನೇಮಕಾತಿ ಪ್ರಾಧಿಕಾರವಾದ ವ್ಯವಸ್ಥಾಪನಾ ಮಂಡಳಿಯ ಸಭೆಗೆ ಅನುಮೋದನೆಗಾಗಿ ಮಂಡಿಸಿದೆ.

<u>ತೀರ್ಮಾನ</u> :

ವಿಷಯವನ್ನು ಸಭೆಯಲ್ಲಿ ಚರ್ಚಿಸಲಾಯಿತು. ಮಾನ್ಯ ಕುಲಪತಿಗಳು ಸದರಿ ವಿಷಯದ ಅಂಶಗಳನ್ನು ಸಭೆಯಲ್ಲಿ ವಿವರಿಸಿದರು. ಸರ್ವೋಚ್ಚ ನ್ಯಾಯಾಲಯದ ತೀರ್ಪು, ಸರ್ಕಾರದ ಆದೇಶ ಹಾಗೂ ವಿ.ವಿ.ನಿಲಯದ ಪರಿನಿಯಮಗಳನ್ವಯ ಪರಿಶೀಲಿಸಿ ಸೂಕ್ತ ನಿರ್ಧಾರ ಕೈಗೊಳ್ಳುವಂತೆ ಮಾನ್ಯ ಕುಲಪತಿಗಳಿಗೆ ಅಧಿಕಾರ ನೀಡಲಾಯಿತು.

* * * * * * *

<u>ವಿಷಯ ಸಂಖ್ಯೆ: 166.12</u>

ವಿಷಯ : ಪ್ರಥಮ ದರ್ಜೆ ಗುಮಾಸ್ತ ಹುದ್ದೆಗೆ ಪದೋನ್ನತಿ ನೀಡುವ ಬಗ್ಗೆ.

* * * * * *

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ದ್ವಿತೀಯ ದರ್ಜೆ ಗುಮಾಸ್ತ ಹುದ್ದೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ನೌಕರರು ದಿನಾಂಕ: 15.09.2021 ರಂದು ನೀಡಿರುವ ಮನವಿಯನ್ನು ಅವಗಾಹನೆಗೆ ತರಲಾಗಿದೆ.

ಸದರಿ ಮನವಿಯಲ್ಲಿ ನೌಕರರು ನಾವು 14 ವರ್ಷಗಳಿಂದ ಒಂದೇ ಹುದ್ದೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಕೆಲವೇ ವರ್ಷಗಳಲ್ಲಿ ವಯೋ ನಿವೃತ್ತಿ ಹೊಂದಲಿದ್ದೇವೆ, ವೇತನವೊಂದೇ ಜೀವನ ನಿರ್ವಹಣೆಯ ಏಕೈಕ ಮೂಲವಾಗಿದ್ದು, ಮಕ್ಕಳ ವಿದ್ಯಾಭ್ಯಾಸ, ವೃದ್ಧ ತಂದೆ ತಾಯಿಯ ಔಷಧೋಪಚಾರ, ಕುಟುಂಬ ನಿರ್ವಹಣೆ ಕಷ್ಟ ಸಾಧ್ಯವಾಗಿದೆ. ಈ ಹಿನ್ನೆಲೆಯಲ್ಲಿ, ಒಂದೇ ಹುದ್ದೆಯಲ್ಲಿ

ಕುಲಪತಿಗಳು



ಕುಲಸಚಿವರು

ನಿಷ್ಠೆಯಿಂದ ಸೇವೆ ಸಲ್ಲಿಸುತ್ತಿರುವುದನ್ನು ಪರಿಗಣಿಸಿ ನಮಗೆ ಪ್ರಥಮ ದರ್ಜೆ ಗುಮಾಸ್ತ ಹುದ್ದೆಗೆ ಪದೋನ್ನತಿ ನೀಡಬೇಕೆಂದು ವಿನಂತಿಸಿರುತ್ತಾರೆ.

ವಾಸ್ತವವಾಗಿ, 2007ರಲ್ಲಿ ನಡೆದ ವಿವಿಧ ಬೋಧಕೇತರ ಹುದ್ದೆಗಳ ನೇಮಕಾತಿಯಲ್ಲಿ ಉಲ್ಲೇಖಿತ ಮನವಿಯಲ್ಲಿ ಹೆಸರಿಸಿರುವ ನೌಕರರುಗಳನ್ನೂ ಒಳಗೊಂಡಂತೆ ದ್ವಿತೀಯ ದರ್ಜೆ ಗುಮಾಸ್ತ / ಡೇಟಾ ಎಂಟ್ರಿ ಆಪರೇಟರ್ಸ್ ಹುದ್ದೆಗಳಿಗೆ ನೇರ ನೇಮಕಗೊಂಡು ಅಂದಿನಿಂದಲೂ ಸುಮಾರು 14 ವರ್ಷಗಳ ಕಾಲ ಒಂದೇ ಹುದ್ದೆಯಲ್ಲಿ ಯಾವುದೇ ಪದೋನ್ನತಿಯನ್ನು ಪಡೆಯದೇ ಕಾರ್ಯ ನಿರ್ವಹಿಸುತ್ತಿದ್ದಾರೆ. ಇವರಂತೆಯೇ ಇನ್ನೂ ಹಲವಾರು ನೌಕರರು ಸುಮಾರು 10 / 11 ವರ್ಷಗಳಿಂದ ಒಂದೇ ಹುದ್ದೆಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ.

ವಿಶ್ವವಿದ್ಯಾನಿಲಯದಲ್ಲಿ 77 ಪ್ರಥಮ ದರ್ಜೆ ಗುಮಾಸ್ತ ಹುದ್ದೆಗಳು ಸೃಜನೆಯಾಗಿರುತ್ತದೆ. ಪ್ರಸ್ತುತ 39 ನೌಕರರು ಪ್ರದಗು ಹುದ್ದೆಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದು, 38 ಹುದ್ದೆಗಳು ಖಾಲಿಯಿರುತ್ತವೆ. ಚಾಲ್ತಿಯಲ್ಲಿರುವ ವೃಂದ ಮತ್ತು ನೇಮಕಾತಿ ಪರಿನಿಯಮದನ್ವಯ ನೇರ ನೇಮಕಾತಿಗೆ ಶೇಕಡ 50 ಹಾಗೂ ಪದೋನ್ನತಿಗೆ ಶೇಕಡ 50ರಷ್ಟು ಹುದ್ದೆಗಳನ್ನು ಪರಿಗಣಿಸಬೇಕಿದ್ದು, ಪದೋನ್ನತಿಗೆ ದ್ವಿತೀಯ ದರ್ಜೆ ಗುಮಾಸ್ತ / ಟಿ.ಸಿ.ಸಿ ನೌಕರರನ್ನು ಮತ್ತು ಡೇಟಾ ಎಂಟ್ರಿ ಆಪರೇಟರ್‌ಗಳನ್ನು 4:1ರ ಅನುಪಾತದಲ್ಲಿ ಪರಿಗಣಿಸಬೇಕಿರುತ್ತದೆ.

ವಿಶ್ವವಿದ್ಯಾನಿಲಯವು ಯುಜಿಸಿಯ ಓಡಿಎಲ್ ಮಾರ್ಗಸೂಚಿಯನ್ವಯ, ಪ್ರಸಕ್ತ 2021-22ರ ಶೈಕ್ಷಣಿಕ ಸಾಲಿನಿಂದ 11 ಹೊಸ ಶೈಕ್ಷಣಿಕ ಕಾರ್ಯಕ್ರಮಗಳನ್ನು ಪ್ರಾರಂಭಿಸಿರುತ್ತದೆ. ವಿದ್ಯಾರ್ಥಿಗಳಿಗೆ ನೀಡುತ್ತಿರುವ ಶೈಕ್ಷಣಿಕ ಸೇವೆಯನ್ನು ಅವರಿರುವಲ್ಲಿಯೇ ನೀಡುವ ದೃಷ್ಟಿಯಿಂದ ಹಾಲಿಯಿರುವ 20 ಪ್ರಾದೇಶಿಕ ಕೇಂದ್ರಗಳ ಜೊತೆಗೆ ಇತ್ತೀಚೆಗೆ ಬಾಗಲಕೋಟೆಯಲ್ಲಿಯೂ ಪ್ರಾದೇಶಿಕ ಕೇಂದ್ರವನ್ನು ಹೊಸದಾಗಿ ತೆರೆದು ಕಾರ್ಯಾರಂಭ ಮಾಡಲಾಗಿದೆ. ಸದ್ಯದಲ್ಲಿಯೇ ಬೆಂಗಳೂರಿನಲ್ಲಿ ಮತ್ತೊಂದು ಹಾಗೂ ಮಡಿಕೇರಿಯಲ್ಲಿಯೂ ಪ್ರಾದೇಶಿಕ ಕೇಂದ್ರವನ್ನು ಹೊಸದಾಗಿ ಪ್ರಾರಂಭಿಸುವ ಪ್ರಕ್ರಿಯೆ ಪ್ರಾರಂಭವಾಗಿರುತ್ತದೆ. ಹೊಸದಾಗಿ ಪ್ರಾರಂಭಿಸಿರುವ ಶೈಕ್ಷಣಿಕ ಕಾರ್ಯಕ್ರಮಗಳ ಪ್ರವೇಶಾತಿ ಮತ್ತಿತರೆ ಸೇವೆಗಳನ್ನು ವ್ಯತ್ಯಯವಿಲ್ಲದೇ ನಿರ್ವಹಿಸುವ ದೃಷ್ಟಿಯಿಂದ ಹಾಗೂ ಹೊಸದಾಗಿ ಪ್ರಾರಂಭಿಸಲ್ಪಡುತ್ತಿರುವ ಪ್ರಾದೇಶಿಕ ಕೇಂದ್ರಗಳನ್ನೂ ಒಳಗೊಂಡಂತೆ ಕೇಂದ್ರಗಳ ಸುಸೂತ್ರ ಆಡಳಿತ ನಿರ್ವಹಣೆಗೆ ನುರಿತ ಮತ್ತು ಅನುಭವ ಹೊಂದಿರುವ ನೌಕರರ ಸೇವೆ ಅಗತ್ಯವಾಗಿದ್ದು, ಈಗಾಗಲೇ ಹಲವಾರು ವರ್ಷಗಳಿಂದ ಸೇವೆ ಸಲ್ಲಿಸಿ, ಅನುಭವ ಹೊಂದಿರುವ ನೌಕರರ ಸೇವೆಯನ್ನು ಪದೋನ್ನತಿ ನೀಡುವ ಮೂಲಕ ಪಡೆಯಬಹುದಾಗಿದೆ.

ಪ್ರಸ್ತುತ ಖಾಲಿಯಿರುವ 38 ಪ್ರದಗು ಹುದ್ದೆಗಳಲ್ಲಿ 7 ಹುದ್ದೆಗಳನ್ನು ಅನುಚ್ಛೇಧ 371ಜೆ ರನ್ವಯ ಕಲ್ಯಾಣ ಕರ್ನಾಟಕ ಭಾಗದವರಿಗೆ ಮೀಸಲಿಡಬೇಕಿರುತ್ತದೆ. ಉಳಿದ 31 ಹುದ್ದೆಗಳಲ್ಲಿ ಪದೋನ್ನತಿಗೆ ಮೀಸಲಿರುವ ಶೇಕಡ 50 ಹುದ್ದೆಗಳನ್ನೂ ಒಳಗೊಂಡಂತೆ ನೇರ ನೇಮಕಾತಿಗೆ ಮೀಸಲಿರುವ ಶೇಕಡ 50 ಹುದ್ದೆಗಳಲ್ಲಿ ಕೆಲವು ಹುದ್ದೆಗಳನ್ನು ಮುಂದೆ ಖಾಲಿಯಾಗುವ ಪ್ರದಗು (ಅಂದರೆ ಮುಂದಿನ ಹಂತದ ಹುದ್ದೆಯ ಪದೋನ್ನತಿ / ನಿವೃತ್ತಿಯಿಂದ ಖಾಲಿಯಾಗುವ ಹುದ್ದೆಗಳಿಂದ) ಹುದ್ದೆಗಳಿಂದ ಸರಿದೂಗಿಸುವ ಆಧಾರದ ಮೇಲೆ ಪ್ರಸ್ತುತ 23 ಪ್ರದಗು ಹುದ್ದೆಗಳ ಪದೋನ್ನತಿಗೆ ಪರಿಗಣಿಸಬಹುದಾಗಿದೆ.

ಈ ರೀತಿ ಪದೋನ್ನತಿ ನೀಡಿದ ತರುವಾಯವೂ ಕಲ್ಯಾಣ ಕರ್ನಾಟಕದ 7 ಹುದ್ದೆಗಳನ್ನೂ ಒಳಗೊಂಡಂತೆ ಒಟ್ಟಾರೆ 15 ಪ್ರದಗು ಹುದ್ದೆಗಳು ಖಾಲಿಯಿರುತ್ತವೆ.

ಪ್ರಸ್ತುತ ಚಾಲ್ತಿಯಲ್ಲಿರುವ ವೃಂದ ಮತ್ತು ನೇಮಕಾತಿ ಪರಿನಿಯಮ, ಸೇವಾ ಜೇಷ್ಠತೆ ಹಾಗೂ ಸರ್ಕಾರದ ಮೀಸಲಾತಿ ನಿಯಮದನ್ವಯ ದ್ವಿತೀಯ ದರ್ಜೆ ಗುಮಾಸ್ತ / ಟಿ.ಸಿ.ಸಿ ಹಾಗೂ ಡಿ.ಇ.ಓ ಹುದ್ದೆಗಳಿಂದ ಪ್ರಥಮ ದರ್ಜೆ ಗುಮಾಸ್ತ ಹುದ್ದೆಯ ಪದೋನ್ನತಿ ನೀಡುವ ಸಂಬಂಧದಲ್ಲಿ ವಿಷಯವನ್ನು

ಕುಲಪತಿಗಳು                ಕುಲಸಚಿವರು

ನೇಮಕಾತಿ ಪ್ರಾಧಿಕಾರವಾದ ಮಾನ್ಯ ವ್ಯವಸ್ಥಾಪನಾ ಮಂಡಳಿಯ ಸಭೆಗೆ ಚರ್ಚೆ ಹಾಗೂ ನಿರ್ಣಯಕ್ಕಾಗಿ ವಿಷಯ ಮಂಡಿಸಿದೆ.

ತೀರ್ಮಾನ :

ವಿಷಯವನ್ನು ಚರ್ಚಿಸಿದ ಸಭೆಯು, ವಿಶ್ವವಿದ್ಯಾನಿಲಯವು ಅಳವಡಿಸಿಕೊಂಡಿರುವ ಪರಿನಿಯಮಗಳನ್ವಯ ಕ್ರಮ ವಹಿಸುವಂತೆ ತೀರ್ಮಾನಿಸಿತು.

ಮುಂದುವರೆದು, ಮಾನ್ಯ ಸದಸ್ಯರಾದ ಶ್ರೀ ಎನ್. ಕೃಷ್ಣೇಗೌಡರವರು ಮಾತನಾಡಿ, ವಿ.ವಿ.ನಿಲಯವು ಪ್ರಾರಂಭದಿಂದಲೂ ಇರುವ ವೃಂದ ಮತ್ತು ನೇಮಕಾತಿ ನಿಯಮವನ್ನೇ ಅನುಸರಿಸುತ್ತಿದ್ದು, ಎಸ್.ಎಸ್.ಎಲ್.ಸಿ. ತೇರ್ಗಡೆ ಹೊಂದಿದವರು ಉನ್ನತ ಹುದ್ದೆಗಳಾದ ಸಹಾಯಕ ಕುಲಸಚಿವ ಹಾಗೂ ಉಪಕುಲಸಚಿವ ಹುದ್ದೆಗೆ ಪದೋನ್ನತಿ ಪಡೆದು ಕೆಲಸ ನಿರ್ವಹಿಸುವುದರಿಂದ ಗುಣಮಟ್ಟದ ಕೆಲಸವನ್ನು ನಿರೀಕ್ಷಿಸಲು ಸಾಧ್ಯವಿರುವುದಿಲ್ಲ. ಹಾಗಾಗಿ, ಪ್ರಸ್ತುತ ಚಾಲ್ತಿಯಲ್ಲಿರುವ ವಿ.ವಿ.ನಿಲಯದ ವೃಂದ ಮತ್ತು ನೇಮಕಾತಿ ಪರಿನಿಯಮವನ್ನು ತಿದ್ದುಪಡಿ ಮಾಡುವುದು ಸೂಕ್ತವೆಂದು ಸಲಹೆ ನೀಡಿದರು. ಇದಕ್ಕೆ ಪ್ರತಿಕ್ರಿಯಿಸಿದ ಕುಲಸಚಿವರು, ವೃಂದ ಮತ್ತು ನೇಮಕಾತಿ ಪರಿನಿಯಮದ ತಿದ್ದುಪಡಿ ಕೆಲಸವು ಸರ್ಕಾರದ ಮಟ್ಟದಲ್ಲಿ ನಡೆಯಬೇಕೆಂದು ಸಭೆಗೆ ತಿಳಿಸಿದರು. ಇದಕ್ಕೆ ಪ್ರತಿಕ್ರಿಯಿಸಿದ ಮಾನ್ಯ ಸದಸ್ಯರು ತಿದ್ದುಪಡಿ ಮಾಡುವ ಸಂಬಂಧ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಲು ಸಮಿತಿ ರಚಿಸಿ, ಮುಂದುವರೆಯಲು ಅನುಮೋದಿಸಿತು.

* * * * * * *

ವಿಷಯ ಸಂಖ್ಯೆ : 166.13

ವಿಷಯ : 58ನೇ ಶೈಕ್ಷಣಿಕ ಮಂಡಳಿ ಸಾಮಾನ್ಯ ಸಭೆಯ ನಡವಳಿಯನ್ನು ಅನುಮೋದಿಸುವ ಕುರಿತು.

* * * * * * *

ದಿನಾಂಕ: 15.11.2021ರಂದು ನಡೆದ 58ನೇ ಶೈಕ್ಷಣಿಕ ಮಂಡಳಿ ಸಾಮಾನ್ಯ ಸಭೆಯ ನಡವಳಿಯನ್ನು ಮುಂಬರುವ 166ನೇ ವ್ಯವಸ್ಥಾಪನಾ ಮಂಡಳಿ ಸಾಮಾನ್ಯ ಸಭೆಯ ಅನುಮೋದನೆಗಾಗಿ ಮಂಡಿಸಲಾಗಿದೆ.

* * * * * *

ತೀರ್ಮಾನ :

58ನೇ ಶೈಕ್ಷಣಿಕ ಮಂಡಳಿ ಸಾಮಾನ್ಯ ಸಭೆಯ ವಿಷಯಗಳನ್ನು ಚರ್ಚಿಸಿದ ಸಭೆಯು, ಸಭೆಯ ನಡವಳಿಯನ್ನು ಅನುಮೋದಿಸಿತು.

* * * * * * *

ವಿಷಯ ಸಂಖ್ಯೆ : 166.14

ವಿಷಯ : **Ashwin Kumar & Co., Chartered Accountants, Bengaluru,** ಇವರಿಗೆ ಲೆಕ್ಕ ಪರಿಶೋಧನಾ ಕಾರ್ಯಕ್ಕೆ ಕಾಲ ಮಿತಿ ಮತ್ತು ಸಂಭಾವನೆ ನಿಗದಿಪಡಿಸುವ ಕುರಿತು.

* * * * *

ವಿಶ್ವವಿದ್ಯಾನಿಲಯದ ಸಹಭಾಗಿತ್ವ ಸಂಸ್ಥೆಗಳ ವತಿಯಿಂದ 2009-10 ರಿಂದ 2015-16ನೇ ಶೈಕ್ಷಣಿಕ ಸಾಲುಗಳಲ್ಲಿ ಪ್ರವೇಶಾತಿ ಪಡೆದಿರುವ ವಿದ್ಯಾರ್ಥಿಗಳ ಸಂಖ್ಯೆಗನುಗುಣವಾಗಿ ಪ್ರವೇಶಾತಿ, ಪರೀಕ್ಷಾ, ಅಧ್ಯಯನ ಕೇಂದ್ರಗಳ ಸ್ಥಾಪನೆ ಹಾಗೂ ಇತರೆ ಸೇವೆಗಳಿಗೆ ಸಂಬಂಧಿಸಿದ ಡಿ.ಡಿ.ಗಳನ್ನು

ಕುಲಪತಿಗಳು



ಕುಲಸಚಿವರು

ಲೆಕ್ಕಸಮನ್ವಯಗೊಳಿಸುವ ಸಂಬಂಧ ಕಂಡುಬಂದಿರುವ ನ್ಯೂನತೆಗಳ ಪರಿಶೀಲನಾ ಕಾರ್ಯ ನಿರ್ವಹಿಸಲು ಮಾನ್ಯ ಕುಲಪತಿಗಳ ಅನುಮೋದನೆ ಮೇರೆಗೆ, Ashwin Kumar & Co., Chartered Accountants, Bengaluru, ಇವರನ್ನು ದಿನಾಂಕ: 24.03.2021ರಂದು ನೇಮಕ ಮಾಡಲಾಗಿರುತ್ತದೆ (ಅನುಬಂಧ-1).

ಸದರಿ ಸಂಸ್ಥೆಯವರಿಗೆ ಮುಂಗಡ ಮೊತ್ತ ರೂ.1,00,000/- (ರೂ.ಒಂದು ಲಕ್ಷ ಮಾತ್ರ) ಗಳನ್ನು ದಿನಾಂಕ: 30.04.2021ರ ಕಚೇರಿ ಆದೇಶದನ್ವಯ ಪಾವತಿಸಲಾಗಿರುತ್ತದೆ (ಅನುಬಂಧ-2).

ಸದರಿ ಸಂಸ್ಥೆಯವರು ದಿನಾಂಕ: 09.11.2021ರಂದು ಮನವಿ ಸಲ್ಲಿಸಿ, ಪ್ರಸ್ತುತ ಸದರಿ ಕಾರ್ಯವು ಪ್ರಗತಿಯಲ್ಲಿದ್ದು, ಪ್ರತಿ ಒಂದು ವರ್ಷದ ಅವಧಿಯ ಪರಿಶೀಲನಾ ಕಾರ್ಯಕ್ಕೆ ರೂ.7,50,000/- (+ ಜಿಎಸ್‌ಟಿ) ಗಳ ಅಂದಾಜು ಮೊತ್ತ ವೆಚ್ಚವಾಗುವುದಾಗಿ ತಿಳಿಸಿ, ರೂ.10,00,000/-(ರೂ.ಹತ್ತು ಲಕ್ಷಗಳು ಮಾತ್ರ) ಗಳನ್ನು ಮುಂಗಡ ಮೊತ್ತ ಪಾವತಿಸುವಂತೆ ಕೋರಿರುತ್ತಾರೆ (ಅನುಬಂಧ-3).

ಮೇಲಿನ ಅಂಶಗಳನ್ನು ವ್ಯವಸ್ಥಾಪನಾ ಮಂಡಳಿ ಸಭೆಯ ಅವಗಾಹನೆಗಾಗಿ ತರುತ್ತಾ, ವಿಷಯವನ್ನು ಚರ್ಚೆ ಮತ್ತು ನಿರ್ಣಯಕ್ಕಾಗಿ ಮಂಡಿಸಿದೆ.

ತೀರ್ಮಾನ :

ಸದರಿ ವಿಷಯವನ್ನು ಗಂಭೀರವಾಗಿ ಚರ್ಚಿಸಿದ ಸಭೆಯು, ವಿಷಯಕ್ಕೆ ಸಂಬಂಧಪಟ್ಟ ಎಲ್ಲ ಮಾಹಿತಿಗಳನ್ನು ವಿವರಿಸುವಂತೆ ಮಾನ್ಯ ಕುಲಪತಿಗಳನ್ನು ಕೋರಿದರು. ಮಾನ್ಯ ಕುಲಪತಿಗಳು ಪೂರ್ಣ ಮಾಹಿತಿಯನ್ನು ಸಭೆಯಲ್ಲಿ ವಿವರಿಸಿದರು. ಇದಕ್ಕೆ ಪ್ರತಿಕ್ರಿಯಿಸಿದ ಮಾನ್ಯ ಸದಸ್ಯರುಗಳು ವಿ.ವಿ.ನಿಲಯಕ್ಕೆ ಇಷ್ಟು ದೊಡ್ಡ ಮಟ್ಟದಲ್ಲಿ ನಷ್ಟವಾಗಿರುವುದರಿಂದ, ಕಾರಣರಾದವರನ್ನು ಗುರುತಿಸಿ, ತಪ್ಪಿತಸ್ಥರ ಮೇಲೆ ಎಫ್.ಐ.ಆರ್. ಕ್ರಮ ಜರುಗಿಸುವಂತೆ ಅನುಮೋದಿಸಿತು.

ಮುಂದುವರೆದು, ಮಾತನಾಡಿದ ಮಾನ್ಯ ಕುಲಪತಿಗಳು, ಈ ಕುರಿತು ಸಾಕಷ್ಟು ಮಂದಿ ಕಾರ್ಯಪ್ರವೃತ್ತರಾಗಿದ್ದು, ವಿ.ವಿ.ಗೆ ಎರಡು ಹಂತದ ವರದಿ ಸಲ್ಲಿಕೆಯಾಗಿರುವುದನ್ನು ಸಭೆಯ ಗಮನಕ್ಕೆ ತಂದರು. ನಂತರ ಪ್ರತಿಕ್ರಿಯಿಸಿದ ಮಾನ್ಯ ಸದಸ್ಯರುಗಳು ಪ್ರಮುಖ ಮೂರು ವಿಷಯಗಳಿಗೆ ಸಂಬಂಧಿಸಿದಂತೆ (ವಿ.ವಿ.ಗೆ ಆಗಿರುವ ನಷ್ಟ, ಆರ್ಬಿಟ್ರೇಷನ್ ಪ್ರಕರಣ ಹಾಗೂ ಅಲ್‌ಗೋಲ್ ಪ್ರಕರಣ) ಆಡಿಟ್ ವರದಿಯನ್ವಯ ಎಫ್.ಐ.ಆರ್. ಮಾಡಿ, ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳುವಂತೆ ಸೂಚಿಸಿದರು.

ಲೆಕ್ಕ ಪರಿಶೋಧಕರಾದ **Ashwin Kumar & Co., Chartered Accountants, Bengaluru,** ಇವರ ಕೋರಿಕೆಯಂತೆ ಪ್ರತಿ ಒಂದು ವರ್ಷದ ಅವಧಿಯ ಪರಿಶೀಲನಾ ಕಾರ್ಯಕ್ಕೆ ತಗುಲುವ ಅಂದಾಜು ವೆಚ್ಚ ರೂ.7,50,000/- + ಜಿ.ಎಸ್.ಟಿ. ಪಾವತಿಸಲು ಹಾಗೂ ರೂ. 10.00 ಲಕ್ಷ ಗಳನ್ನು (ರೂಪಾಯಿ ಹತ್ತು ಲಕ್ಷಗಳು ಮಾತ್ರ) ಮುಂಗಡವಾಗಿ ಪಾವತಿಸಲು ಸಭೆಯು ಅನುಮೋದಿಸಿತು.

* * * * * * *

ವಿಷಯ ಸಂಖ್ಯೆ : 166.15

ವಿಷಯ : ಹಣಕಾಸು ಸಮಿತಿಯ 83ನೇ ಸಭೆಯ ನಡವಳಿಯನ್ನು ವ್ಯವಸ್ಥಾಪನಾ ಮಂಡಳಿ ಸಭೆಯಲ್ಲಿ ಅನುಮೋದಿಸುವ ಬಗ್ಗೆ.

* * * * * * *

ಕುಲಪತಿಗಳು



ಕುಲಸಚಿವರು

ದಿನಾಂಕ: 17.11.2021ರಂದು ನಡೆದ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಹಣಕಾಸು ಸಮಿತಿ 83ನೇ ಸಭೆಯ ನಡವಳಿಯನ್ನು ವ್ಯವಸ್ಥಾಪನಾ ಮಂಡಳಿಯ 166ನೇ ಸಾಮಾನ್ಯ ಸಭೆಗೆ ಅನುಮೋದನೆಗಾಗಿ ಮಂಡಿಸಲಾಗಿದೆ.

* * * * * * *

<u>ತೀರ್ಮಾನ</u> :

ವಿಷಯದ ಬಗ್ಗೆ ಚರ್ಚಿಸಿದ ಸಭೆಯು, ವಿ.ವಿ.ನಿಲಯದ 83ನೇ ಹಣಕಾಸು ಸಮಿತಿ ಸಭೆಯ ನಡವಳಿಯನ್ನು ಅನುಮೋದಿಸಿತು.

* * * * * * *

<u>ವಿಷಯ ಸಂಖ್ಯೆ: 166.16</u>

**ವಿಷಯ : ವಿವಿ ನಿಲಯದ ಕೇಂದ್ರ ಕಛೇರಿ ಹಾಗೂ ಪ್ರಾದೇಶಿಕ ಕೇಂದ್ರಗಳಲ್ಲಿರುವ ಹಳೆಯ Photo Copier ಯಂತ್ರಗಳ ಬಗ್ಗೆ.**

* * * * * *

ದಿನಾಂಕ: 19.03.2021 ರಂದು ನಡೆದ " Requirements of ICT infrastructure" ಬಗೆಗಿನ ತಾಂತ್ರಿಕ ಸಮಿತಿ ಸಭೆಯಲ್ಲಿನ ವಿಷಯಗಳಲ್ಲಿ ಒಂದಾದ Recommendation for Repair and Replacement of Photo Copier Machines ಗೆ ಸಂಬಂಧಿಸಿದಂತೆ ವಿಶ್ವವಿದ್ಯಾನಿಲಯದ ಕೇಂದ್ರ ಕಛೇರಿ ಹಾಗೂ ಪ್ರಾದೇಶಿಕ ಕೇಂದ್ರಗಳಲ್ಲಿ Ricoh, Toshiba ಹಾಗೂ ವಿವಿಧ ಕಂಪನಿಯ ಸುಮಾರು 70 (ಎಪ್ಪತ್ತು) Photo Copier Machines ಗಳಿದ್ದು Ricoh ಯಂತ್ರಗಳು ದುರಸ್ಥಿಗೊಂಡ ಸಮಯದಲ್ಲಿ M/s. Sumuka Office Solutions, Mysore (Authorised dealers) ರವರಿಂದ on call basis ರಿಪೇರಿ ಕಾರ್ಯವನ್ನು ನಿರ್ವಹಿಸಿಕೊಳ್ಳಲಾಗುತ್ತಿದ್ದು, ಕೇಂದ್ರ ಕಛೇರಿ ಹಾಗೂ ಪ್ರಾದೇಶಿಕ ಕೇಂದ್ರಗಳಲ್ಲಿರುವ copier machine ಗಳ ರಿಪೇರಿ ಕಾರ್ಯಕ್ಕೆ ಹೆಚ್ಚು ವೆಚ್ಚವಾಗುತ್ತಿರುವ ಬಗ್ಗೆ ವಿವರವಾಗಿ ಸಭೆಯಲ್ಲಿ ಚರ್ಚಿಸಲಾಗಿ ಸಭೆಯು ಕೆಳಕಂಡಂತೆ ಶಿಫಾರಸ್ಸು ಮಾಡಿದ್ದು, ಈ ಸಂಬಂಧ ಚರ್ಚೆ ಹಾಗೂ ನಿರ್ಣಯಕ್ಕಾಗಿ ಮಾನ್ಯ ವ್ಯವಸ್ಥಾಪನಾ ಮಂಡಳಿ ಸಭೆಗೆ ವಿಷಯ ಮಂಡಿಸಿದೆ.

- The Committee studied the specification of the copier machines thoroughly.
- Committee opined that, periodic maintenance is necessary for the effective functioning of the electronic machines. The Committee observed that the copier machines were purchased during the year before 2012. Committee also analyzed that the cost of maintenance of the existing copier machines considering consumable and non-consumable items is exceeding the purchase / cost price.
- Committee made an economical and feasibility study of the existing scenario and recommended to purchase new copier machines.
- Committee recommended getting survey report of machines that can be repaired and number of machines to be replaced in the main campus.
- Committee also suggested to go for buyback mechanism of the older copier machines.
- Committee noticed that the copier machines available in Regional Centres were purchased in the year 2011 which are of basic features and not equipped for scanning which is most needed for online admission. And hence the committee recommended to buyback all the Photocopier machines available in Regional Centres.

ಕುಲಪತಿಗಳು



ಕುಲಸಚಿವರು

ತೀರ್ಮಾನ :

ವಿಷಯದ ಬಗ್ಗೆ ಚರ್ಚಿಸಿದ ಸಭೆಯು, ದಿನಾಂಕ : 19.03.2021ರಂದು ನಡೆದ ತಾಂತ್ರಿಕ ಸಮಿತಿ ಸಭೆಯ ಶಿಫಾರಸ್ಸಿನನ್ವಯ ಕ್ರಮ ವಹಿಸುವಂತೆ ಅನುಮೋದಿಸಿತು.

* * * * * * *

ವಿಷಯ ಸಂಖ್ಯೆ: 166.17

ವಿಷಯ : ಪ್ರಾದೇಶಿಕ ಕೇಂದ್ರಗಳಿಗೆ **Students ID Card Printer** ಗಳನ್ನು ಖರೀದಿಸುವ ಬಗೆಗೆ.

* * * * * *

ಪ್ರಸ್ತುತ ವಿಶ್ವವಿದ್ಯಾನಿಲಯದ ವಿವಿಧ ಶೈಕ್ಷಣಿಕ ಕಾರ್ಯಕ್ರಮಗಳಿಗೆ ಪ್ರವೇಶಾತಿ ಹೊಂದುವ ವಿದ್ಯಾರ್ಥಿಗಳಿಗೆ PVC ಮಾದರಿಯ ಕಾರ್ಡ್‌ನಲ್ಲಿ ID Card ಗಳನ್ನು ಕೇಂದ್ರ ಕಛೇರಿಯ ಪ್ರವೇಶಾತಿ ವಿಭಾಗದಿಂದಲೇ ವಿತರಿಸಲಾಗುತ್ತಿದೆ. ಆದರೆ ಪ್ರಾದೇಶಿಕ ಕೇಂದ್ರಗಳ ನಿರ್ದೇಶಕರುಗಳು ವಿಶ್ವವಿದ್ಯಾನಿಲಯಕ್ಕೆ ಪತ್ರ ಬರೆದು ಆಯಾಯ ಪ್ರಾದೇಶಿಕ ಕೇಂದ್ರಗಳಲ್ಲಿಯೇ ವಿದ್ಯಾರ್ಥಿಗಳಿಗೆ ID Card ವಿತರಿಸುವ ವ್ಯವಸ್ಥೆ ಮಾಡಿಕೊಡುವಂತೆ ಕೋರಿರುತ್ತಾರೆ.

ವಿದ್ಯಾರ್ಥಿಗಳು ಪ್ರಾದೇಶಿಕ ಕೇಂದ್ರಗಳಲ್ಲಿ ಪ್ರವೇಶಾತಿ ಪಡೆದ ಸಂದರ್ಭದಲ್ಲಿ ವಿದ್ಯಾರ್ಥಿಗಳಿಗೆ ಅನುಕೂಲವಾಗುವಂತೆ ಸ್ಥಳದಲ್ಲೇ ಐ.ಡಿ. ಕಾರ್ಡ್‌ಗಳನ್ನು ವಿತರಿಸುವ ಸಲುವಾಗಿ ಹಾಗೂ ಪ್ರಾದೇಶಿಕ ನಿರ್ದೇಶಕರುಗಳ ಕೋರಿಕೆಯಂತೆ ಒಟ್ಟು 23 ಪ್ರಾದೇಶಿಕ ಕೇಂದ್ರಗಳಿಗೆ ಐ.ಡಿ. ಕಾರ್ಡ್ ಪ್ರಿಂಟರ್ ಯಂತ್ರಗಳನ್ನು ಖರೀದಿಸಿ ವಿತರಿಸುವ ಬಗ್ಗೆ ಮಾನ್ಯ ವ್ಯವಸ್ಥಾಪನಾ ಮಂಡಳಿ ಸಭೆಯ ಚರ್ಚೆ ಹಾಗೂ ನಿರ್ಣಯಕ್ಕಾಗಿ ವಿಷಯ ಮಂಡಿಸಿದೆ.

ತೀರ್ಮಾನ :

ವಿಷಯದ ಬಗ್ಗೆ ಚರ್ಚಿಸಿದ ಸಭೆಯು, ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಪ್ರಾದೇಶಿಕ ಕೇಂದ್ರಗಳಲ್ಲಿ ಪ್ರವೇಶಾತಿ ಪಡೆದ ವಿದ್ಯಾರ್ಥಿಗಳಿಗೆ ಸ್ಥಳದಲ್ಲೇ ಐ.ಡಿ. ಕಾರ್ಡ್‌ಗಳನ್ನು ವಿತರಿಸುವ ಸಲುವಾಗಿ 23 ಪ್ರಾದೇಶಿಕ ಕೇಂದ್ರ ಕಛೇರಿಗಳಿಗೆ ಐ.ಡಿ. ಕಾರ್ಡ್ ಪ್ರಿಂಟರ್ ಯಂತ್ರಗಳನ್ನು ಖರೀದಿಸಿ, ವಿತರಿಸುವ ಕೆಲಸಕ್ಕೆ ಅನುಮೋದನೆ ನೀಡಿತು.

* * * * * * *

ವಿಷಯ ಸಂಖ್ಯೆ: 166.18

ವಿಷಯ : ವಿವಿ ನಿಲಯಕ್ಕೆ ಹೆಚ್ಚುವರಿಯಾಗಿ ಬೋಧಕ ಹಾಗೂ ಬೋಧಕೇತರ ಹುದ್ದೆಗಳನ್ನು ಸೃಜಿಸುವ ಕುರಿತು.

* * * * * *

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯವು ಸ್ಥಾಪನೆಯಾದ ಸಂದರ್ಭದಲ್ಲಿ ಮೈಸೂರು ವಿವಿ ನಿಲಯದಿಂದ ಅಭಿಮತದ ಮೇಲೆ ವರ್ಗಾವಣೆಗೊಂಡ 79 ಬೋಧಕರು ಹಾಗೂ 129 ಬೋಧಕೇತರ ಹುದ್ದೆಗಳು ಒಳಗೊಂಡಂತೆ, ಸರ್ಕಾರವು ಸಂಖ್ಯೆ:ಇಡಿ 22 ಯುಬಿವಿ 2007 ದಿನಾಂಕ: 10.07.2007 ರಲ್ಲಿ ಮತ್ತು ಸಂಖ್ಯೆ ಇಡಿ 31 ಯುಓವಿ 2006 ದಿನಾಂಕ: 02.01.2007 ಕ್ರಮವಾಗಿ 195 ಮತ್ತು 221 ಬೋಧಕೇತರ ಹುದ್ದೆಗಳನ್ನು ಹಾಗೂ ದಿನಾಂಕ:07-12-2017ರಂದು 30 ಬೋಧಕ ಹುದ್ದೆಗಳನ್ನು ಸೃಜಿಸಿ ಆದೇಶಿಸಲಾಗಿರುತ್ತದೆ.

ಕುಲಪತಿಗಳು



ಕುಲಸಚಿವರು

ವಿಶ್ವವಿದ್ಯಾನಿಲಯದ ವಿವಿಧ ಪ್ರಾದೇಶಿಕ ಕೇಂದ್ರಗಳ ಸೂಸೂತ್ರ ಆಡಳಿತ ನಿರ್ವಹಣೆ ಮಾಡುವ ಹಿನ್ನೆಲೆಯಲ್ಲಿ ಪ್ರಾದೇಶಿಕ ನಿರ್ದೇಶಕ ಹುದ್ದೆಗಳನ್ನು ಪರಿನಿಯಮದ ಮೂಲಕ ಸೃಜನೆ ಮಾಡಲಾಗಿರುತ್ತದೆ.

ಯು.ಜಿ.ಸಿ.ಯು F.No.14-5 2018 (DEB-I) Dated: 14.08.2018 & 25.10.2018 ರ ಪತ್ರದಲ್ಲಿ ವಿಶ್ವವಿದ್ಯಾನಿಲಯಕ್ಕೆ ಸ್ನಾತಕ ಹಾಗೂ ಸ್ನಾತಕೋತ್ತರ ವಿವಿಧ ಪದವಿಗಳನ್ನು ದೂರ ಶಿಕ್ಷಣದಡಿಯಲ್ಲಿ 2018-19 ರಿಂದ 2022-23 ರ ವರೆಗೆ ನಡೆಸಲು ಅನುಮತಿ ನೀಡಲಾಗಿರುತ್ತದೆ.

ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಸಚಿವಾಲಯದ ಅಧಿಸೂಚನೆ ಸಂಖ್ಯೆ: ಸಂವ್ಯಶಾಇ 43 ಶಾಸನ 2020, ಬೆಂಗಳೂರು, ದಿನಾಂಕ: 30.12.2020 ರ ಕರ್ನಾಟಕ ರಾಜ್ಯ ಪತ್ರದಲ್ಲಿ "ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯವನ್ನು ಹೊರತುಪಡಿಸಿ ಯಾವುದೇ ವಿಶ್ವವಿದ್ಯಾನಿಲಯವು ವಿಶ್ವವಿದ್ಯಾನಿಲಯದ ಪ್ರದೇಶದೊಳಗೆ ಅಥವಾ ಹೊರಗೆ ಮುಕ್ತ ಮತ್ತು ದೂರ ಶಿಕ್ಷಣ ವಿಧಾನದಲ್ಲಿ ಯಾವುದೇ ಕಾರ್ಯಕ್ರಮವನ್ನು ನೀಡತಕ್ಕದ್ದಲ್ಲ" ಎಂದು ಪ್ರಕಟಿಸಲಾಗಿರುತ್ತದೆ.

ಅದರಂತೆ, ಕರ್ನಾಟಕ ರಾಜ್ಯದಲ್ಲಿ "ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯವನ್ನು ಏಕ ಮಾತ್ರ ದೂರಶಿಕ್ಷಣ ನೀಡುವ ವಿಶ್ವವಿದ್ಯಾನಿಲಯ ಎಂದು ಘೋಷಿಸಿದ್ದ ಹಿನ್ನೆಲೆಯಲ್ಲಿ ವಿಶ್ವವಿದ್ಯಾನಿಲಯವು ಶಿಕ್ಷಣಕ್ರಮಗಳನ್ನು ಉನ್ನತ ಮಟ್ಟದಲ್ಲಿ ವಿದ್ಯಾರ್ಥಿಗಳಿಗೆ ನೀಡುವ ಉದ್ದೇಶ ಹೊಂದಿರುತ್ತದೆ. ಕಲಾ, ವಿಜ್ಞಾನ ಮತ್ತು ವಾಣಿಜ್ಯ ಕಾರ್ಯಕ್ರಮಗಳು ಯು.ಜಿ.ಸಿ ಮಾನ್ಯತೆಯೊಂದಿಗೆ ನಡೆಯುತ್ತಿದ್ದು, 2021-22ನೇ ಸಾಲಿನಿಂದ ಹೊಸದಾಗಿ ಬಿ.ಎಸ್ಸಿ., ಬಿ.ಎಸ್ಸಿ., (ಐಟಿ), ಬಿ.ಎಸ್ಸಿ., (ಹೋಂ ಸೈನ್ಸ್), ಬಿ.ಸಿ.ಎ, ಬಿ.ಬಿ.ಎ., ಎಂಬ ಸ್ನಾತಕ ಕಾರ್ಯಕ್ರಮಗಳನ್ನು ಹಾಗೂ ಎಂ.ಎ., (ಶಿಕ್ಷಣಶಾಸ್ತ್ರ), ಎಂ.ಎಸ್ಸಿ., (ಪ್ರಾಣಿಶಾಸ್ತ್ರ), ಎಂ.ಎಸ್ಸಿ., (ಸಸ್ಯಶಾಸ್ತ್ರ), ಎಂ.ಎಸ್ಸಿ., (ಮಾಹಿತಿ ತಂತ್ರಜ್ಞಾನ), ಎಂ.ಎಸ್ಸಿ., (ಆಹಾರ ಮತ್ತು ಪೌಷ್ಠಿಕತೆ), ಎಂಬ ಸ್ನಾತಕೋತ್ತರ ಕಾರ್ಯಕ್ರಮಗಳನ್ನು ನಡೆಸಲು ಯು.ಜಿ.ಸಿಗೆ ಪ್ರಸ್ತಾವನೆ ಸಲ್ಲಿಸಲಾಗಿ. 2021-22 ನೇ ಸಾಲಿನಿಂದ ಸದರಿ ಕಾರ್ಯಕ್ರಮಗಳನ್ನು ನಡೆಸಲು ಅನುಮತಿ ನೀಡಿರುತ್ತದೆ.

ವಿಶ್ವವಿದ್ಯಾನಿಲಯದಲ್ಲಿ ನೂತನವಾಗಿ ದೃಶ್ಯ-ಶ್ರವ್ಯ ಸ್ಟುಡಿಯೋ (KSOU Audio-Visual Studio) ಸಹ ತೆರೆಯಲಾಗಿದ್ದು, ವಿಶ್ವವಿದ್ಯಾನಿಲಯದ ವಿವಿಧ ಅಧ್ಯಯನ ವಿಭಾಗಗಳ ಅಧ್ಯಾಪಕರಿಂದ ವಿದ್ಯಾರ್ಥಿಗಳಿಗೆ ಬೋಧನಾ ಕಾರ್ಯವನ್ನು ಸಹ ನಡೆಸಲಾಗುತ್ತಿದೆ. ಈ ಸಂಬಂಧವಾಗಿ ದೃಶ್ಯ-ಶ್ರವ್ಯ ಸ್ಟುಡಿಯೋಗೆ ಅಗತ್ಯ ತಾಂತ್ರಿಕ ಹುದ್ದೆಗಳನ್ನು ಸೃಜನೆ ಮಾಡಿಕೊಳ್ಳುವುದು ಅವಶ್ಯವಿರುತ್ತದೆ.

ವಿಶ್ವವಿದ್ಯಾನಿಲಯವು ಕಾರ್ಯನಿರ್ವಹಿಸುವ ಕೇಂದ್ರ ಕಚೇರಿಯಲ್ಲದೇ ವಿವಿಧ ಜಿಲ್ಲೆಗಳಲ್ಲಿ ಪ್ರಾದೇಶಿಕ ಕೇಂದ್ರಗಳನ್ನು ತೆರೆದು ಅಲ್ಲಿಯೂ ಕೂಡ ಶೈಕ್ಷಣಿಕ ಚಟುವಟಿಕೆಗಳು ನಡೆಯಲು ಅನುಕೂಲ ಮಾಡಿಕೊಡುವ ನಿಟ್ಟಿನಲ್ಲಿ ಇತ್ತೀಚೆಗೆ ಬೀದರ್, ಬಾಗಲಕೋಟೆ, ಬೊಮ್ಮನಹಳ್ಳಿ ಹಾಗೂ ಮಡಿಕೇರಿಗಳಲ್ಲಿ ಪ್ರಾದೇಶಿಕ ಕೇಂದ್ರಗಳನ್ನು ಹೊಸದಾಗಿ ತೆರೆಯಲಾಗಿರುತ್ತದೆ.

ವಿಶ್ವವಿದ್ಯಾನಿಲಯದ ಸುಸೂತ್ರ ಆಡಳಿತ ನಿರ್ವಹಣಾ ದೃಷ್ಟಿಯಿಂದ ಪ್ರಾಧಿಕಾರ ವಿಭಾಗ, ಸಿಐಕ್ಯೂಎ, ಯುಜಿಸಿ ಸೆಲ್, ಸಂಶೋಧನಾ ವಿಭಾಗ ಮುಂತಾದ ವಿಭಾಗಗಳನ್ನು ಸೃಜಿಸಲಾಗಿರುತ್ತದೆ. ಇತ್ತೀಚಿನ ತಾಂತ್ರಿಕ ಬೆಳವಣಿಗೆಗನುಗುಣವಾಗಿ ತಾಂತ್ರಿಕ ಸಿಬ್ಬಂದಿಯ ನೆರವನ್ನೂ ಸಹ ಪಡೆಯಬೇಕಾಗಿರುತ್ತದೆ.

ವಿಜ್ಞಾನ ಕೋರ್ಸ್‌ಗಳಿಗೆ ಸಂಬಂಧಿಸಿದಂತೆ ಲ್ಯಾಬ್‌ಗಳನ್ನು ತೆರೆಯಲಾಗಿದ್ದು, ಪ್ರಯೋಗಾಲಯಗಳಿಗೆ ತಾಂತ್ರಿಕ ಹುದ್ದೆಗಳಾದ ಇನ್ಸ್‌ಟ್ರಕ್ಟರ್, ಅಸಿಸ್ಟೆಂಟ್ ಇನ್ಸ್‌ಟ್ರಕ್ಟರ್, ಲ್ಯಾಬ್

ಕುಲಪತಿಗಳು

ಕುಲಸಚಿವರು

ಅಸಿಸ್ಟೆಂಟ್, ಟೆಕ್ನಿಕಲ್ ಅಸಿಸ್ಟೆಂಟ್‌ಗಳು ಸೇರಿದಂತೆ ಇನ್ನಿತರೆ ಅಗತ್ಯ ಹುದ್ದೆಗಳನ್ನು ಸೃಜಿಸುವ ಅಗತ್ಯ ವಿರುತ್ತದೆ.

ಈ ಹಿನ್ನೆಲೆಯಲ್ಲಿ ಅಗತ್ಯವಿರುವ ಬೋಧಕ ಮತ್ತು ಬೋಧಕೇತರ ಹುದ್ದೆಗಳನ್ನು ಸೃಜಿಸುವ ಸಂಬಂಧ ವಿಷಯವನ್ನು ವ್ಯವಸ್ಥಾಪನಾ ಮಂಡಳಿ ಸಭೆಯ ಚರ್ಚೆ ಹಾಗೂ ನಿರ್ಣಯಕ್ಕೆ ಮಂಡಿಸಿದೆ.

<u>ತೀರ್ಮಾನ</u> :

**ವಿಷಯದ ಬಗ್ಗೆ ಚರ್ಚಿಸಿದ ಸಭೆಯು, ವಿ.ವಿ.ನಿಲಯದ ವಿಸ್ತರಣಾ ಕಾರ್ಯಕ್ಕನುಗುಣವಾಗಿ ಬೇಕಾಗಿರುವ ವಿಜ್ಞಾನ ಕೋರ್ಸ್‌ಗಳಿಗೆ ಸಂಬಂಧಿಸಿದಂತೆ ಪ್ರಯೋಗಾಲಯಗಳಿಗೆ ಅಗತ್ಯವಾಗಿ ಬೇಕಾಗಿರುವ ತಾಂತ್ರಿಕ ಹುದ್ದೆಗಳನ್ನೊಳಗೊಂಡಂತೆ ಅಗತ್ಯವಿರುವ ಬೋಧಕ ಹಾಗೂ ಬೋಧಕೇತರ ಹುದ್ದೆಗಳನ್ನು ಸೃಜಿಸಬೇಕಾಗಿದೆಯೆಂದು ಮಾನ್ಯ ಕುಲಪತಿಗಳು ಸಭೆಯಲ್ಲಿ ತಿಳಿಸಿದರು. ಈ ಸಂಬಂಧವಾಗಿ ಅನುಸರಿಸಬೇಕಾದ ಪ್ರಕ್ರಿಯೆಗೆ ಮಾನ್ಯ ಕುಲಪತಿಗಳಿಗೆ ಅಧಿಕಾರ ನೀಡಿ, ಸಂಬಂಧಿಸಿದ ಪ್ರಾಧಿಕಾರಗಳು/ಸರ್ಕಾರದಿಂದ ಅನುಮತಿ ಪಡೆದುಕೊಂಡು ಕ್ರಮ ವಹಿಸಲು ಅನುಮೋದನೆ ನೀಡಿತು.**

* * * * * * *

ಅಂತಿಮವಾಗಿ, ವ್ಯವಸ್ಥಾಪನಾ ಮಂಡಳಿಯ 166ನೇ ಸಾಮಾನ್ಯ ಸಭೆಗೆ ಆಗಮಿಸಿ ಮಂಡಿಸಲಾದ ವಿಷಯಗಳ ಬಗ್ಗೆ ಚರ್ಚಿಸಿ, ತಮ್ಮ ಅಮೂಲ್ಯ ಸಲಹೆ, ಸೂಚನೆಗಳನ್ನು ನೀಡಿ, ಸಭೆಯನ್ನು ಸುಸೂತ್ರವಾಗಿ ನಡೆಸಿಕೊಟ್ಟಿದ್ದಕ್ಕೆ ಮಾನ್ಯ ಕುಲಪತಿಗಳು ಹಾಗೂ ಕುಲಸಚಿವರು ಎಲ್ಲ ಸದಸ್ಯರುಗಳಿಗೂ ಧನ್ಯವಾದಗಳನ್ನು ತಿಳಿಸುವುದರೊಂದಿಗೆ ಸಭೆಯು ಮುಕ್ತಾಯಗೊಂಡಿತು.

* * * * * * *

ಕುಲಪತಿಗಳು

ಕುಲಸಚಿವರು